**DAC – 430**

# ಮೂರನೆ ಬಿ.ಎ. ಪದವಿ ಪರೀಕ್ಷೆ, ಸೆಪ್ಟೆಂಬರ್/ಅಕ್ಟೋಬರ್ 2012
# (Directorate of Distance Education)
# ಅಂಚೆ ಮತ್ತು ತೆರಪಿನ ಶಿಕ್ಷಣ
# ಕನ್ನಡ ಐಚ್ಛಿಕ ಪತ್ರಿಕೆ - ೫
# (ಹಳಗನ್ನಡ ವ್ಯಾಕರಣ ಮತ್ತು ಕನ್ನಡ ಭಾಷೆಯ ಚರಿತ್ರೆ)

ಸಮಯ : 3 ಗಂಟೆಗಳು | ಗರಿಷ್ಠ ಅಂಕಗಳು : 70/80

## ಅ – ವಿಭಾಗ
## (ಹಳಗನ್ನಡ ವ್ಯಾಕರಣ)

1. ಕೆಳಗಿನ **ಒಂದು** ಸೂತ್ರಕ್ಕೆ ವ್ಯಾಖ್ಯಾನ ಬರೆಯಿರಿ. **(1×6=06)**

   ೧) ಶ್ರೀ ವಾಗ್ದೇವಿಗೆ ಶಬ್ದದಿ
   ನಾವಾವಿಂದ್ರಿಯದ ವಿಷಯಮಂ ಶ್ರೋತ್ರದೊಳು
   ದ್ಭಾವಿಪ ನಿರ್ಮಳ ಮೂರ್ತಿಗಿ
   ಳಾವಂದ್ಯೆಗೆ ಶಾಸ್ತ್ರಮುಖದೊಳವನತನಪ್ಪೆಂ.

   ೨) ಪತಿಕುಲಜಾತ್ಯವಯವವಿ
   ಶ್ರುತಲಕ್ಷಣ ಸನ್ನಿಧಾನ ಸಂಸ್ಪರ್ಶಸಮಾ
   ಗತ ಸಂಬಂಧದೊಳಂ ತ
   ದ್ಗತ ಸಂಬಂಧದೊಳಮುಂಟು ಷಷ್ಠಿಗೆ ಯೋಗಂ.

2. ಕೆಳಗಿನ ಸೂತ್ರ ಭಾಗಗಳಲ್ಲಿ **ಎರಡನ್ನು** ಉದಾಹರಣೆಯೊಂದಿಗೆ ವಿವರಿಸಿ. **06**

   ೧) ಅಸಹ್ಯ ವೃತ್ತಿಯೊಳ್ ತಾಂ ಬಹುತ್ವಮೇಕತ್ವದೊಳಂ

   ೨) ಬೆಳೆಯೆಂಬ ಧಾತು ಸಸ್ಯಾವಳಿಯೊಳ್

   ೩) ಪರಪದೊಳರ್ಥವರ್ತನಮಿರೆ ತತ್ಪುರುಷಂ

   ೪) ತೃತೀಯೆ ಪೇಟಿಲ್ ಪಡೆಗುಂ ಸಲೆ ಕರ್ತೃಕರಣ ಹೇತುಸ್ಥಿತಿಯೊಳ್.

3. ಕೆಳಗಿನ **ಎರಡು** ಮಾತುಗಳಿಗೆ ವ್ಯಾಕರಣ ವಿಶೇಷಗಳನ್ನು ಬರೆಯಿರಿ. **06**

   ೧) ಬ್ರಾಹ್ಮಣಂಗೆ ಗೋವಂ ಕೊಟ್ಟಂ

   ೨) ಬಡವಾದಿರರಸ ಕಾಯಲೋಳ್ ನಡೆದಪಿರಿ

   ೩) ಮನದೊಳ್ ದಯೆಯಿಲ್ಲದವನ ಕಣ್ಣೆಂ ಪುಣ್ಣೆಂ...

   ೪) ಕಃ ಕೇನಾರ್ಥೀ ಕೋ ದರಿದ್ರಃ ಎನುತಂ...

P.T.O.

4. **ಎರಡು** ವಿಷಯಗಳಿಗೆ ಟಿಪ್ಪಣಿ ಬರೆಯಿರಿ. **04**

೧) ಕನ್ನಡದಲ್ಲಿ ನಾಲ್ಕೇ ವಿಭಕ್ತಿಗಳು

೨) ಅಪಭ್ರಂಶದ ಔಚಿತ್ಯ

೩) ಸಂಧಿದೋಷ

೪) ಬಿಂದು.

5. **ಎರಡು** ಪ್ರಶ್ನೆಗಳಿಗೆ ಉತ್ತರಿಸಿ. **(9×2=18)**

೧) ಕನ್ನಡ ವರ್ಣಮಾಲೆಯನ್ನು ವಿವರಿಸಿ. ಆಧುನಿಕ ದೃಷ್ಟಿಯಲ್ಲಿ ವಿಮರ್ಶೆ ಮಾಡಿ.

೨) ಆಗಮ ಸಂಧಿಗಳ ಲಕ್ಷಣ ಬರೆದು, ಉದಾಹರಣೆಗಳನ್ನು ನೀಡಿ.

೩) ಆಖ್ಯಾತ ಪ್ರತ್ಯಯಗಳು ಎಂದರೇನು ? ಉದಾಹರಣೆಗಳೊಂದಿಗೆ ಬರೆಯಿರಿ.

೪) ಶಿಥಿಲದ್ವಿತ್ವ ಎಂದರೇನು ? ಅದು ಬರುವ ಸಂದರ್ಭಗಳನ್ನು ಕುರಿತು ಬರೆಯಿರಿ.

## ಆ – ವಿಭಾಗ

## (ಕನ್ನಡ ಭಾಷೆಯ ಚರಿತ್ರೆ)

6. **ಎರಡು** ಪ್ರಶ್ನೆಗಳಿಗೆ ಉತ್ತರಿಸಿ. **(8×2=16)**

೧) ಉಪಭಾಷೆಗಳು ಎಂದರೇನು ? ಕನ್ನಡ ಪ್ರಾದೇಶಿಕ ಮತ್ತು ಸಾಮಾಜಿಕ ಉಪಭಾಷೆಗಳನ್ನು ಕುರಿತು ಬರೆಯಿರಿ.

೨) ಕನ್ನಡ ಭಾಷೆಯ ಪ್ರಮುಖ ಅಂಗಗಳು ಯಾವುವು ? ನಾಮ ಪ್ರಕೃತಿಗಳಿಗೆ ಹತ್ತುವ ಪ್ರತ್ಯಯಗಳನ್ನು ಕುರಿತು ಬರೆಯಿರಿ.

೩) ಭಾಷಾ ವರ್ಗೀಕರಣದ ತತ್ವಗಳಾವುವು ? ದ್ರಾವಿಡ ಭಾಷೆಗಳನ್ನು ಕುರಿತು ವಿವರವಾಗಿ ಬರೆಯಿರಿ.

7. **ಎರಡನ್ನು** ಕುರಿತು ಟಿಪ್ಪಣಿ ಬರೆಯಿರಿ. **(4×2=8)**

೧) ಸರ್ವನಾಮಗಳು

೨) ಭಾರತೀಯ ಭಾಷಾ ಪರಿವಾರಗಳು

೩) ಶ್ರಾವಣ–ಚಾಕ್ಷುಷ.

8. **ಮೂರು** ಪದಗಳಿಗೆ ಭಾಷಾ ವಿಜ್ಞಾನದ ದೃಷ್ಟಿಯಿಂದ ಟಿಪ್ಪಣಿಸಿ. **(3×2=6)**

೧) ಅಕ್ಕಚ್ಚು

೨) ಮೈಸೂರು ಪಾಕ

೩) ಉಡುಗೊರೆ

೪) ಸೊಲ್ಲರಿಮೆ (ವ್ಯಾಕರಣ)

೫) ಪರಿಸೆ.

9. ಯಾವುದಾದರೂ **ಎರಡು** ಪ್ರಶ್ನೆಗೆ ಉತ್ತರಿಸಿ. **(80** ಅಂಕಗಳ ಪದ್ಧತಿಯವರಿಗೆ **ಕಡ್ಡಾಯ)**. **(5×2=10)**

೧) ಭಾಷೆಯ ಹುಟ್ಟು ಮತ್ತು ಬೆಳವಣಿಗೆಯನ್ನು ಕುರಿತು ಬರೆಯಿರಿ.

೨) ಪೂರ್ವದ ಹಳಗನ್ನಡದ ಲಕ್ಷಣಗಳನ್ನು ಉದಾಹರಣೆಗಳೊಂದಿಗೆ ವಿವರಿಸಿ.

೩) ಕನ್ನಡ ಶಬ್ದದ ನಿಷ್ಪತ್ತಿ, ಕನ್ನಡ್ತ ನಾಡು – ನುಡಿಗಳ ಪ್ರಾಚೀನತೆಯನ್ನು ಕುರಿತು ಬರೆಯಿರಿ.